ಪೊಲೀಸ್ ಠಾಣೆಗಳಿಗೆ ವಾಹನಗಳ ಕೊರತೆ

502 (909) ಶ್ರೀ ಆನಂದ ಸಿಂಗ್ (ವಿಜಯನಗರ–ಬಳ್ಳಾರಿ) :– ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಹೊಸಪೇಟೆಯ ಪೊಲೀಸ್ ಉಪ ವಿಭಾಗದ ಠಾಣೆಗಳಲ್ಲಿ ವಾಹನಗಳ ಕೊರತೆಯಿಂದ ಕೆಲಸ ಕಾರ್ಯಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಕೊರತೆಯಿರುವ ಪೊಲೀಸ್ ಠಾಣೆಗಳಿಗೆ ವಾಹನ ಪೂರೈಕೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

ಇ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪೊಲೀಸ್ ಠಾಣೆಗಳಿಗೆ ವಾಹನಗಳ ಕೊರತೆಯನ್ನು ನೀಗಿಸಲಾಗಿದೆ ?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):–

ಅ) ಮತ್ತು ಆ) ಕರ್ನಾಟಕ ರಾಜ್ಯದಲ್ಲಿರುವ ಪ್ರತಿಯೊಂದು ಪೊಲೀಸ್ ಠಾಣೆಗಳಿಗೂ ಸಹ ಒಂದು 4 ಚಕ್ರದ ವಾಹನಗಳು (ಜೀಪು) ಹಾಗೂ 2 ದ್ವಿಚಕ್ರ ವಾಹನಗಳು ಮಂಜೂರಾಗಿರುತ್ತದೆ. ಅದರಂತೆ ಹೊಸಪೇಟೆ ಉಪ ವಿಭಾಗದಲ್ಲಿ 6 ಠಾಣೆಗಳಿದ್ದು, ಎಲ್ಲಾ ಪೊಲೀಸ್ ಠಾಣೆಗಳಿಗೆ ಒಟ್ಟು 6 ಜೀಪುಗಳನ್ನು ಮತ್ತು 12 ದ್ವಿಚಕ್ರ ವಾಹನಗಳನ್ನು ಒದಗಿಸಿರುವುದರಿಂದ ವಾಹನಗಳ ಕೊರತೆ ಇರುವುದಿಲ್ಲ.

ಅ) ಕಳೆದ ಮೂರು ವರ್ಷಗಳಲ್ಲಿ ಬಳ್ಳಾರಿ ಜಿಲ್ಲೆಗೆ ವಿವಿಧ ಮಾದರಿಯ 22 ವಾಹನಗಳು, 12 ಜೀಪುಗಳು, 10 ದ್ವಿಚಕ್ರ ವಾಹನಗಳನ್ನು ಒದಗಿಸಲಾಗಿದೆ. ಇವುಗಳ ಪೈಕಿ ಹೊಸಪೇಟೆ ಉಪ ವಿಭಾಗಕ್ಕೆ 2 ಜೀಪುಗಳು, 1 ಇಂಟರ್ ಸೆಪ್ಟರ್, 1 ದ್ವಿಚಕ್ರ ವಾಹನ ಹಂಚಿಕೆ ಮಾಡಲಾಗಿದ್ದು ಕೊರತೆ ಇರುವುದಿಲ್ಲ.

ಪೊಲೀಸ್ ಆಧುನೀಕರಣದ ಖರೀದಿ

608 (934) **ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ)** :– ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–